**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಿಗಳು**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಗೂಲಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಿರುವವರಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ: 1.ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ:44:ಸೇಸ್ಥ:2013, ದಿನಾಂಕ:22.02.2014.
2.ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ:33:ಯುಇಸಿ:2014, ದಿನಾಂಕ:14.11.2014.
3.ಸರ್ಕಾರದ ಆದೇಶ ಸಂಖ್ಯೆ:ಇಡಿ:91:ಹೆಚ್‌ಪಿಸಿ:2022, ದಿನಾಂಕ:08.06.2022.

*****

**ಪ್ರಸ್ತಾವನೆ:**

ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ದಿನಾಂಕ:10.04.2006ರಂದು 10 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ದಿನಗೂಲಿ ನೌಕರರನ್ನು ಅವರು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರೆಸಲು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಉಲ್ಲೇಖ(1)ರ ಸರ್ಕಾರದ ಅಧಿಸೂಚನೆಯನ್ವಯ ಈ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರೆಸಲು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಉಲ್ಲೇಖ(3)ರ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡಿರುವ ಅನುದಾನದಲ್ಲಿ ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ಕಾಲೇಜು ಶಿಕ್ಷಣದ (ರಾಜ್ಯ ವಲಯ ಯೋಜನೆಗಳು) ಸಂಬಂದಿಸಿದಂತೆ ಆಯವ್ಯಯದಲ್ಲಿನ ಯೋಜನಾ ಕಾರ್ಯಕ್ರಮಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಷರತ್ತು ಬದ್ಧವಾಗಿ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ. ಸದರಿ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ:1:ಟಿಎಫ್‌ಪಿ:2022, ದಿನಾಂಕ:04.04.2022ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿರುತ್ತದೆ. ಹಾಗೂ ಎರಡನೇ ತ್ರೈಮಾಸಿಕ ಅನುದಾನವನ್ನು ಬಿಡುಗಡೆ ಮಾಡಲು ಅನುಮೋದನೆ ನೀಡಲಾಗಿರುತ್ತದೆ.

ಪ್ರಸ್ತುತ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ 12 ಸರ್ಕಾರಿ ಪ್ರಥಮ ದರ್ಜೆ ಕಾಲೇಜು/ವಿದ್ಯಾರ್ಥಿ ನಿಲಯಗಳಲ್ಲಿ ಒಟ್ಟು 12 ದಿನಗೂಲಿ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು, ಇವರಿಗೆ ನಿಯಮಾನುಸಾರ ಕ್ಲೇಮು ಮಾಡಬೇಕಾಗಿರುವ ವೇತನವನ್ನು ಪಾವತಿಸಲು ಅನುದಾನ ಬಿಡುಗಡೆ ಮಾಡಬೇಕಾಗಿರುತ್ತದೆ. 2022-23ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2202-03-103-2-01-033ರಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ 12 ದಿನಗೂಲಿ ನೌಕರರ ಜೂನ್-2022 ರಿಂದ ಆಗಸ್ಟ್-2022ರ ಮಾಹೆಯವರೆಗೂ ವೇತನ ಪಾವತಿಸಲು ಒಟ್ಟು ರೂ.8,35,488/-(ಎಂಟು ಲಕ್ಷದ ಮೂವತ್ತೈದು ಸಾವಿರದ ನಾಲ್ಕು ನೂರ ಎಂಭತ್ತೇಂಟು ರೂಪಾಯಿಗಳು)ಮಾತ್ರ ಅನುದಾನವನ್ನು ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಬಿಡುಗಡೆ ಮಾಡಲು ಈ ಆದೇಶ:

**ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ದಿ.ನೌ.ವೇ/14/2022-23, ಬೆಂಗಳೂರು,ದಿನಾಂಕ:22.06.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸೇವೆಯನ್ನು ಅವರುಗಳು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೆ ದಿನಗೂಲಿ ನೌಕರರಾಗಿ ಮುಂದುವರೆಸಿ ಉಲ್ಲೇಖ(1) ಮತ್ತು (2)ರಲ್ಲಿ ಆದೇಶಿಸಿರುವ

--2

ಹಿನ್ನಲೆಯಲ್ಲಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ 12 ಕಾಲೇಜು/ವಿದ್ಯಾರ್ಥಿನಿಲಯದ ಒಟ್ಟು 12 ಸಿಬ್ಬಂದಿಗಳಿಗೆ ಅವರ ಹೆಸರಿನ ಮುಂದೆ ನಮೂದಿಸಿರುವ ಮೊತ್ತ ಪಾವತಿಸಲು ರೂ.8,35,488/-(ಎಂಟು ಲಕ್ಷದ ಮೂವತ್ತೈದು ಸಾವಿರದ ನಾಲ್ಕು ನೂರ ಎಂಭತ್ತೆಂಟು ರೂಪಾಯಿಗಳು ಮಾತ್ರ)ಅನ್ನು ಪಾವತಿಸಲು 2022-23ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ:2202-03-103-2-01-033ರಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

**(ಮಾನ್ಯ ಆಯುಕ್ತರಿಂದ ಇ-ಆಫೀಸ್‌ನಲ್ಲಿ ಟಿಪ್ಪಣಿ ಅನುಮೋದಿಸಲ್ಪಟ್ಟಿದೆ)**

**ಕಾಲೇಜು ಶಿಕ್ಷಣ ನಿರ್ದೇಶಕರು**

**ಷರತ್ತುಗಳು :**

1. ಬಿಡುಗಡೆಗೊಳಿಸಿರುವ ಅನುದಾನವನ್ನು ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸಿರುವ ಉದ್ದೇಶಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳನ್ನು ಪಾಲಿಸಿ ಅದರನ್ವಯವೇ ಪಾವತಿಸುವುದು.
2. ಸದರಿ ಅನುದಾನವನ್ನು ಕೆ-2 ತಂತ್ರಾಂಶದಲ್ಲಿ ಕ್ಲೇಮ್ ಮಾಡತಕ್ಕದ್ದು.
3. ಅನುದಾನ ಬಳಕೆಯಾದ ನಂತರ ಕಡ್ಡಾಯವಾಗಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

**ಇವರಿಗೆ:**

ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:**

1.ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಅಂತರ್ಜಾಲದಲ್ಲಿ ಅಳವಡಿಸಲು ಕೋರಿದೆ.

ಆದೇಶ ಸಂಖ್ಯೆ:ಕಾಶಿಇ/ಆಯವ್ಯಯ/ದಿ.ನೌ.ವೇ/14/2022-23, ಬೆಂಗಳೂರು,ದಿನಾಂಕ:22.06.2022.

| ಕ್ರ.ಸಂ | ಸಿಬ್ಬಂದಿಯ ಹೆಸರು | ಕಾಲೇಜಿನ ಹೆಸರು | ಮಾಹೆವಾರು ಪಾವತಿಸಬೇಕಾಗಿರುವ ಮೊತ್ತ | ಜೂನ್-2022 ರಿಂದ ಆಗಸ್ಟ್-2022ರ ಮಾಹೆಯ ವರೆಗೂ ಬಿಡುಗಡೆ ಮಾಡಬೇಕಾಗಿರುವ ಅನುದಾನದ ಮೊತ್ತ |
|---|---|---|---|---|
| 01 | ಮೂರ್ತಿ ವಿ ಎಲ್ | ಸರ್ಕಾರಿ ವಿಜ್ಞಾನ ಕಾಲೇಜು ಬೆಂಗಳೂರು | 24840 | 74520 |
| 02 | ನಾಗರಾಜ ಎಂ | ಸರ್ಕಾರಿ ಆರ್ ಸಿ ಕಾಲೇಜು ಬೆಂಗಳೂರು | 24840 | 74520 |
| 03 | ಸಿದ್ದರಾಮಯ್ಯ ಟಿ | ಸರ್ಕಾರಿ ಕಲಾ ಕಾಲೇಜು ಬೆಂಗಳೂರು | 24840 | 74520 |
| 04 | ನಾಗರಾಜ್ ಡಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚಿಂತಾಮಣಿ | 22392 | 67176 |
| 05 | ಗಂಗಮ್ಮ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ | 22392 | 67176 |
| 06 | ಜಯನರಸಿಂಹಮೂರ್ತಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ | 22392 | 67176 |
| 07 | ಶಿವಲಿಂಗಯ್ಯ ಎಂ | ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು | 23616 | 70848 |
| 08 | ನಾಗರಾಜೇಗೌಡ | ಸರ್ಕಾರಿ ಕಲಾ ಕಾಲೇಜು ಹಾಸನ | 22392 | 67176 |
| 09 | ಗಾಯಿತ್ರಿ ಎಂ ಎಸ್ | ಸರ್ಕಾರಿ ಮಹಿಳಾ ಕಾಲೇಜು ಮಂಡ್ಯ | 22392 | 67176 |
| 10 | ಶಿವಾನಂದ ಸಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭದ್ರಾವತಿ | 22392 | 67176 |
| 11 | ರಂಗಣ್ಣ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾನ್ವಿ | 22392 | 67176 |
| 12 | ಶಂಕರ ಅಡಿವೆಪ್ಪ | ಸರ್ಕಾರಿ ಕಾಲೇಜು ಕಲಬುರಗಿ | 23616 | 70848 |
| | | ಒಟ್ಟು ಮೊತ್ತ | 278496 | 835488 |

(ಒಟ್ಟು ಮೊತ್ತ ರೂ. ಎಂಟು ಲಕ್ಷದ ಮೂವತ್ತೈದು ಸಾವಿರದ ನಾಲ್ಕು ನೂರ ಎಂಭತ್ತೆಂಟು ರೂಪಾಯಿಗಳು ಮಾತ್ರ)

ಕಾಲೇಜು ಶಿಕ್ಷಣ ನಿರ್ದೇಶಕರು